ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ವಿಶೇಷವಾಗಿ ನನ್ನ ಜಿಲ್ಲೆಯಲ್ಲಿ ಸನ್ಮಾನ್ಯ ಕಕ್ಕೀಲಾಯ ಅವರಿಂದ ಹಿಡಿದು ಅನೇಕ ಹಿರಿಯರು ಇದರ ಬಗ್ಗೆ ಹೋರಾಟವನ್ನು ಮಾಡಿದ್ದಾರೆ. ಇವತ್ತು ಅನೇಕ ಮಹನೀಯರು ಜೀವನದ ಕೊನೆಯ ಅಂಚಿನಲ್ಲಿದ್ದಾರೆ. ಬಹುಶಃ ಅವರು ಏನನ್ನೂ ನಿರೀಕ್ಷಣೆ ಮಾಡಿಕೊಂಡು ಹೋರಾಟ ಮಾಡಿಲ್ಲ. ಇಂತಹ ಒಂದು ಅಸಹಾಯಕ ಸ್ಥಿತಿಯಲ್ಲಿರುವವರಿಗೆ ನಮ್ಮ ಕಡೆಯಿಂದ ಏನಾದರೂ ಒಂದು ಕೊಡುಗೆ ಕೊಡುವುದಿದ್ದರೆ, ಈ ಒಂದು ಪೆನ್‌ಷನ್ ಕೊಡುವುದರ ಮೂಲಕ ಸಹಾಯ ಮಾಡಬೇಕು.

ಉಪಾಧ್ಯಕ್ಷರು : ಇದು ರಾಜ್ಯಕ್ಕೆ ಸಂಬಂಧ ಪಟ್ಟ ಹಾಗೆ ಪ್ರಸ್ತಾಪ ಮಾಡಿದ್ದಾರೆ. ಜಿಲ್ಲೆಯ ಬಗ್ಗೆ ಪ್ರತ್ಯೇಕವಾಗಿ ಕೇಳಬೇಕಾಗಿಲ್ಲ.

ಶ್ರೀ ಎನ್. ಯೋಗೀಶ್ ಭಟ್ : ನಾನು ವಿನಂತಿ ಮಾಡುವಂತಾದ್ದು, ಯಾರೋ ತಪ್ಪು ಮಾಡಿದ್ದಕ್ಕೋಸ್ಕರ, ಬಿಜಾಪುರದವರು ಯಾರೋ ಹೆಸರನ್ನು ನೋಂದಾಯಿಸಿತ್ತಾರೆ ಎಂದು ಹೇಳಿ ಸಾರಸಗಟಾಗಿ ಇಡೀ ರಾಜ್ಯದಲ್ಲಿ ಇರುವವರನ್ನು ನ್ಯಾಯಬದ್ಧವಾಗಿ ಹೋರಾಟ ಮಾಡಿದವರಿಗೆ ಅನ್ಯಾಯ ಮಾಡುವುದು ಸರಿಯಲ್ಲ. ಅವರನ್ನು ಗುರುತಿಸಿ ಅವರಿಗೆ ಗೌರವಧನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿಷಯ: ಬೆಂಗಳೂರಿನ ಕಲಾಸಿಪಾಳ್ಯ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹುಡುಗನನ್ನು ಸಾಯಿಸಿರುವ ಬಗ್ಗೆ

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಹೋಮ್ ಮಿನಿಸ್ಟರ್ ಇದ್ದಿದ್ದರೆ ಚೆನ್ನಾಗಿ ಇರುತ್ತಿತ್ತು. ನಾವು ಅವರ ಗಮನಕ್ಕೆ ತರಬೇಕಾಗಿತ್ತು. ಈ ದಿನ ಕಲಾಸಿಪಾಳ್ಯಂ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಒಬ್ಬ 15 ವರ್ಷದ ಹುಡುಗ ಚಂದ್ರಮೂರ್ತಿ ಅನ್ನುವವನನ್ನು ಪೊಲೀಸ್‌ನವರೇ ಓಡಾಡಿಸಿಕೊಂಡು ಹೋಗಿ ಹೊಡೆದು ಸಾಯಿಸಿರತಕ್ಕಂಥಾದ್ದು ಅಲ್ಲಿಯ ಭಾಗದ ಜನರಿಗೆ ಫಾಸಿಯಾಗಿ ಪೊಲೀಸ್ ಸ್ಟೇಷನ್‌ಗೆ ಮುತ್ತಿಗೆ ಹಾಕಿ ಗಲಾಟೆಯಾಯಿತು. ಆಗ ಆಶ್ರುವಾಯು ಸಿಡಿಸಲಾಗಿದೆ. ಲಾಟಿ ಚಾರ್ಜ್ ಆಗಿದೆ. ಅಲ್ಲಿಗೆ ಪೊಲೀಸ್ ಕಮಿಷನರ್ ಮತ್ತು ಬೇರೆಯವರೆಲ್ಲಾ ಹೋಗಿದ್ದಾರೆ. ಆದರೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಪೊಲೀಸ್ ಸ್ಟೇಷನ್‌ನಲ್ಲಿ ಪೊಲೀಸ್ ಇಲಾಖೆಯವರೆ ಆ ಚಿಕ್ಕ ಹುಡುಗನನ್ನು ಥಳಿಸಿ ಸಾಯಿಸಿರತಕ್ಕಂಥಾದ್ದು ಜನಜನಿತವಾಗಿದೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು, ಅದಕ್ಕೆ ತಕ್ಷಣ ಸಂಬಂಧಪಟ್ಟವರನ್ನು ಅಮಾನತ್ತಿನಲ್ಲಿ ಇಟ್ಟು ಅದನ್ನು ಸಿ.ಓ.ಡಿ. ಎನ್‌ಕ್ವೈರಿಗೆ ರೆಫರ್ ಮಾಡಬೇಕು. ಇಲ್ಲದೆ ಹೋದರೆ ಪೊಲೀಸ್ ಇಲಾಖೆ ಮೇಲೆ ಸಂಪೂರ್ಣ ವಿಶ್ವಾಸ ಹೋಗಿದೆ. ಇದರ ಜೊತೆಗೆ ಇನ್ನೊಂದು ಪ್ರಕರಣ ನಮ್ಮ ಪಾವಗಡದ ವಿಚಾರ. ನಾನು ಇವೆರಡಕ್ಕೂ ಒಟ್ಟಿಗೆ ನೋಟೀಸ್ ಅನ್ನು ಪೊಲೀಸ್ ಇಲಾಖೆಗೆ ಸಂಬಂಧಪಟ್ಟಂತಹ ವಿಚಾರವಾಗಿರುವುದರಿಂದ ಕೊಟ್ಟಿದ್ದೇನೆ. ಅದೇ ರೀತಿ ಪಾವಗಡದಲ್ಲಿ ಸಹ ಇವತ್ತು ಸುಮಾರು ಸಾವಿರಾರು ಜನ ಪೊಲೀಸ್ ಸ್ಟೇಷನ್‌ಗೆ ಮುತ್ತಿಗೆ ಹಾಕಿ ಅಲ್ಲಿ ಲಾಕಪ್ ಡೆತ್ ಆಗಿದೆ ಎಂದು ಹೇಳಿ ಗಲಾಟೆ ಮಾಡಿದ್ದಾರೆ. ನಿನ್ನೆ ದಿನ ಆಸ್ಪತ್ರೆ ಮುಂದೆ ಪ್ರತಿಭಟನೆ ಮಾಡಿದ್ದಾರೆ. ಮತ್ತು ಬೀದಿ ಉದ್ದಕ್ಕೂ ಸಹ ಮೇರವಣಿಗೆ ಮಾಡಿದ್ದಾರೆ. ಅಲ್ಲಿ ಸೇರಿದಂತಹ ಪ್ರತಿಭಟನಕಾರರನ್ನೂ ಸಹ ಬಂಧಿಸಿ ಅವರಿಗೆ ಏಟು ಕೊಟ್ಟಿದ್ದಾರೆ. ಅವರೆಲ್ಲರೂ ಪ್ರತ್ಯಕ್ಷವಾಗಿ ಈ ಪೊಲೀಸ್‌ನವರೇ ಹೊಡೆದು ಸಾಯಿಸಿದ್ದಾರೆ ಎಂದು ಹೇಳಿದ್ದಾರೆ. ಇವತ್ತು ಪೊಲೀಸ್‌ನವರೇ ಹಿಡಿದು ಸಾಯಿಸುವಂತಹ ಪರಿಸ್ಥಿತಿಗೆ ಬಂದರೆ

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಇನ್ನು ಸಾರ್ವಜನಿಕರ ರಕ್ಷಣೆ ಮಾಡತಕ್ಕಂಥವರು ಯಾರು? ಇವತ್ತು ಪೊಲೀಸ್ ಇಲಾಖೆಯವರೇ ಗೂಂಡಾಗಳಾದರೆ ಅವರೇ ಕೊಲೆಗಾರರಾದರೆ ಇವತ್ತು ಸಮಾಜವನ್ನು ರಕ್ಷಣೆ ಮಾಡತಕ್ಕಂಥವರು ಯಾರು? ಇದು ಬಹಳ ಆತಂಕವಾಗುತ್ತಿದೆ. ಎರಡೂ ಈ ತಕ್ಷಣದಲ್ಲಿ ನಡೆಯಬೇಕು. ಮೊನ್ನೆ ಪಾವಗಡದಲ್ಲಿ ಆಗಿದೆ, ಇಲ್ಲಿ ಇವತ್ತು ಕಲಾಸಿಪಾಳ್ಯದಲ್ಲಿ ಆಗಿದೆ. ಪಾವಗಡದಲ್ಲಿ ಪ್ರತಿಭಟನಕಾರರ ಒತ್ತಾಯ ಏನೆಂದರೆ ಸಬ್‌ಇನ್ಸ್‌ಪೆಕ್ಟರ್ ಮಾಡಿರುವುದರಿಂದ ಅವರನ್ನು ತಕ್ಷಣ ಅಮಾನತ್ತಿನಲ್ಲಿಡಬೇಕು. ಸಿ.ಓ.ಡಿ ಎನ್‌ಕ್ವೈರಿ ಮಾಡಿಸಬೇಕು ಎನ್ನುವಂತಹ ಒತ್ತಾಯವನ್ನು ಮಾಡಿದ್ದಾರೆ. ಹಾಗೂ ಧರಣಿಯನ್ನೂ ಸಹ ಮಾಡುತ್ತಿದ್ದಾರೆ. ಸರ್ಕಾರ ಎರಡು ಪ್ರಕರಣಗಳಲ್ಲಿ ಸಂಬಂಧಪಟ್ಟವನ್ನು ಸಸ್ಪೆಂಡ್ ಮಾಡಬೇಕು ಮತ್ತು ಸಿ.ಓ.ಡಿ ಎನ್‌ಕ್ವೈರಿಗೆ ಹ್ಯಾಂಡ್ ಓವರ್ ಮಾಡುವುದರ ಬಗ್ಗೆ ಆಶ್ವಾಸನೆ ಕೊಡಬೇಕು.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಸೋಮಶೇಖರ್ ಅವರ ಕ್ಲಾರಿಫಿಕೇಷನ್ ಕಾರಣ ಹೇಳುತ್ತೇನೆ. ಚೋಳನಾಯಕನಹಳ್ಳಿ ಬಗ್ಗೆ ಹೇಳುತ್ತೇನೆ. ನಮ್ಮ ಕ್ಷೇತ್ರದ ಬಗ್ಗೆ ಹೇಳುತ್ತಿದ್ದೇನೆ.

ಗೊಂದಲ

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಅವರ ಕ್ಷೇತ್ರದ್ದು ವಿಚಾರ ಅವರು ಹೇಳಲಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಶಾಸಕರ ಮೇಲೆ ಆರೋಪಣೆ ಮಾಡಲಿ, ಮಾಡದೆ ಇರಲಿ ಪಾವಗಡ ಪರಿಸ್ಥಿತಿ ಬಗ್ಗೆ ಇಲ್ಲಿ ನಮೂದು ಮಾಡಿದ್ದಾರೆ, ಪಾವಗಡ ಜನರಿಂದ ಚುನಾಯಿತರಾಗಿರತಕ್ಕಂಥವರ ಬಾಯಿ ಮುಚ್ಚಿಸುವುದು ಸರಿಯಾಗುವುದಿಲ್ಲ. ಅದು ರೆಕಾರ್ಡ್‌ಗೆ ಹೋಗಬೇಕು.

ಗೊಂದಲ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಆಗ ಮಾನ್ಯ ಕೃಷ್ಣಮೂರ್ತಿಯವರು ಮಾತನಾಡುವಾಗ ಅವಕಾಶ ಕೊಡಲಿಲ್ಲ. ಆಗ ಕೇವಲ ಮಹದೇವ ಪ್ರಸಾದ್ ಸೈನ್ ಮಾಡಿದ್ದರು ಎಂದು ಹೇಳಿದಿರಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಪ್ರತಿಯೊಬ್ಬರಿಗೂ ಕೂಡ ಮಾತನಾಡುವಂತಹ ಅವಕಾಶ ಇದೆ.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ಅವಕಾಶ ಕೊಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಎಲ್ಲರಿಗೂ ಮಾತನಾಡುವಂತಹ ಅವಕಾಶ ಇದೆ. ತಾವು ಆಮೇಲೆ ಮಾತನಾಡಿ. ಒಬ್ಬೊಬ್ಬ ಸದಸ್ಯರಿಗೆ ಒಂದೊಂದು ಹಕ್ಕಿದೆ ಎಂದಲ್ಲ. ಎಲ್ಲಾ ಸದಸ್ಯರಿಗೂ ಸಮಾನಾದಂತಹ ಹಕ್ಕಿದೆ. ಈ ಸದನದಲ್ಲಿ ಯಾವುದೇ ಪಕ್ಷದಲ್ಲಿ ಇರುವಂತಹ ಸದಸ್ಯರಾದರೂ ಕೂಡ ಹಕ್ಕು ಮಾತ್ರ ಎಲ್ಲರಿಗೂ ಸಮಾನವಾಗಿದೆ. ಈ ಪಕ್ಷದವರು, ಆ ಪಕ್ಷದವರು ಎಂದು ಯಾವುದೇ ವಿಚಾರವನ್ನು ಯಾರೂ ಮಾತನಾಡಬಾರದು ಎಂದು ಯಾರೂ ಹೇಳುತ್ತಿಲ್ಲ. ಈಗ ನಾನು ಹೇಳುತ್ತಿರುವುದು ಯಾವುದೇ ಒಬ್ಬ ಸದಸ್ಯರ ಮೇಲೆ ನೋಟೀಸ್ ಕೊಟ್ಟು ಆರೋಪ ಮಾಡಿಲ್ಲ. ನಾನು ಶೂನ್ಯವೇಳೆಯಲ್ಲಿ ಬಂದಿರತಕ್ಕಂಥ ವಿಚಾರದಲ್ಲಿ ಲಾಕಪ್‌ಡೆತ್ ಆಗಿರತಕ್ಕಂಥ ವಿಚಾರ ಮತ್ತು ವಾತಾವರಣ ಹಾಗೂ ಘಟನೆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಅದಕ್ಕೆ ಅವರು ಉತ್ತರ ಕೊಡಲಿ. ಆಮೇಲೆ ತಾವು ಅವಕಾಶ ಕೊಡಿ ಅವರು ಮಾತನಾಡಲಿ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಒಬ್ಬ ಸದಸ್ಯರ ಉಪಸ್ಥಿತಿಯಲ್ಲಿ ಅವರ ಮೇಲೆ ಆಪಾದನೆ ಬಂದಾಗ ಅವರಿಗೆ ಮಾತನಾಡುವುದಕ್ಕೆ ಹಕ್ಕಿಲ್ಲವೆಂದರೆ ಯಾವ ನ್ಯಾಯ ಸ್ವಾಮಿ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸೋಮಶೇಖರ್ ಅವರೆ, ಅವರು ಪ್ರಶ್ನೆ ಮಾಡಿದಾಗ ನೀವು ಎದ್ದಿದ್ದಿರಿ....

ಗೊಂದಲ

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಮಹದೇವ್ ಪ್ರಸಾದ್ ಮಾತನಾಡಿದಾಗಲೂ ಕೂಡ ಕೃಷ್ಣಮೂರ್ತಿಯವರ ಕ್ಷೇತ್ರನೂ ಗಡಿ ಭಾಗದಲ್ಲಿದೆ. ಆಗ ಏಕೆ ಕೊಡಲಿಲ್ಲ ನೀವು?

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಈ ಬಗ್ಗೆ ಅವರು ಹೇಳಿದರೆ ನಿಮಗೆ ಏನು ತೊಂದರೆ?

ಗೊಂದಲ

ಶ್ರೀ ಬಿ. ಸೋಮಶೇಖರ್ : ಮೊದಲು ಉತ್ತರ ಕೊಡಿ ಆಮೇಲೆ ಮಾತನಾಡಲಿ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ : ಬಾರ್ಡರ್ ವಿಷಯ ಬಂದಾಗ ತಾವು ಮಾತನಾಡಲಿಲ್ಲವೆ? ನೋಟೀಸ್ ಇಲ್ಲ.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ನಮಗೆ ಅವಕಾಶ ಕೊಡಿ.

ಗೊಂದಲ

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಉಪಾಧ್ಯಕ್ಷರೆ, ಶಾಸಕರು ಬೇರೆ ನೋಟೀಸ್ ಕೊಡಬೇಕಾಗಿಲ್ಲ, ಅವರ ಕ್ಷೇತ್ರದ ಬಗ್ಗೆ ಮಾತನಾಡಿದಾಗ ಅವರಿಗೆ ಅಧಿಕಾರ ಇರುವುದಿಲ್ಲವಾ. ಅವರು ಕ್ಲಾರಿಫೈ ಮಾಡಿಕೊಳ್ಳುವಂಥಾದ್ದು; ಅವರ ಕ್ಷೇತ್ರದ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ನಾಳೆ ಮಾಹಿತಿ ಏನು ಹೋಗುತ್ತದೆ. ಅವರು ಕ್ಷೇತ್ರದ ಬಗ್ಗೆ ಬೇರೆ ಶಾಸಕರು ಮಾತನಾಡಿದಂತಹ ಸಂದರ್ಭದಲ್ಲಿ ಅವರು ಕ್ಲಾರಿಫಿಕೇಶನ್ ಮಾಡಬೇಕೋ, ಬೇಡವೋ?

ಗೊಂದಲ

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನೋಟೀಸ್ ಕೊಟ್ಟಿಲ್ಲ, ಇದು ಶೂನ್ಯ ವೇಳೆ, ಮಾನ್ಯ ಚಂದ್ರೇಗೌಡರೇ, ನಿಯಮಾವಳಿ ಪ್ರಕಾರವೇ ಹೋಗೋಣ, ಇಲ್ಲಿ ನಿಯಮಾವಳಿಯ ಪ್ರಕಾರ ಆ ಸದಸ್ಯರು ತಮಗೆ ನೋಟೀಸ್ ಕೊಟ್ಟಿದ್ದಾರಾ? ಈಗ ಸರ್ಕಾರ ಉತ್ತರ ಕೊಡಲಿ, ಆಮೇಲೆ ಅವರು ಏನಾದರೂ ಕೇಳಬೇಕೆಂದು ಇದ್ದರೆ, ಕೇಳಲಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಈಗ ಅವರು ಹೇಳಬೇಕಾದಂತಹ ವಿಚಾರವನ್ನು ಈ ಸದನದ ಗಮನಕ್ಕೆ ತಂದಿದ್ದಾರೆ; ಆ ಕ್ಷೇತ್ರದ ಶಾಸಕರು ಮಾತನಾಡಬಹುದೇ ಎಂದು ನಿರ್ಣಯ ಮಾಡುವಂತಹ ಅಧಿಕಾರ ನಿಮಗೆ ಇದೆ, ಅದನ್ನು ನೀವೇ ಹೇಳಿ; ಅವರು ಮಾತನಾಡಲಿಲ್ಲವೆಂದರೆ ತಪ್ಪಾಗುತ್ತೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಾನ್ಯ ಸೋಮಶೇಖರ್‌ರವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಸರ್ಕಾರ ಉತ್ತರ ಕೊಡಲಿ,

ಗೊಂದಲ

ಉಪಾಧ್ಯಕ್ಷರು : ಒಟ್ಟಿಗೆ ಉತ್ತರವನ್ನು ಕೊಡಲಿ.

ಶ್ರೀ ಕರಿಯಣ್ಣ : ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ಈ ಕಡೆಯೂ ಗಮನಹರಿಸಿ, ಈಗ ಅವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಸರ್ಕಾರ ಉತ್ತರವನ್ನು ಕೊಡುವುದಕ್ಕಿಂತ ಮುಂಚೆ ಆ ಕ್ಷೇತ್ರದ ಶಾಸಕರು ಇಲ್ಲಿದ್ದಾರೆ, ಅವರು ವಸ್ತುಸ್ಥಿತಿಯನ್ನು ನೋಡಿದ್ದಾರೆ, ಅವರಿಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಡಬೇಕಾಗುತ್ತದೆ; ಆಮೇಲೆ ಉತ್ತರ ಕೊಡಬೇಕಾಗುತ್ತದೆ, ತಾವು ಒಂದೇ ಕಡೆ ಅವಕಾಶವನ್ನು ಕೊಡುತ್ತಿದ್ದೀರಿ.

ಗೊಂದಲ

ಶ್ರೀ ವೆಂಕಟರಮಣಪ್ಪ : ಚೋಳನಾಯಕನಹಳ್ಳಿಯಲ್ಲಿ ಗ್ಯಾಂಬ್ಲಿಂಗ್ ಆಡತಕ್ಕಾವರನ್ನು...

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಸದನವನ್ನು ನಡೆಸುವುದು, ನಾವೆಲ್ಲೂ ನೋಡಲಿಲ್ಲ; ಕಾನೂನು ಸಂಸದೀಯ ಸಚಿವರು ನಿಯಮಗಳನ್ನು ಹೇಳುವಂಥವರು, ಇದ್ದಾರೆ, ಇಲ್ಲಿ ಈಗ ಹೊಂ ಮಿನಿಸ್ಟರ್ ಉತ್ತರವನ್ನು ಹೇಳಲಿ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಈಗ ಮಾನ್ಯ ಸೋಮಶೇಖರ್‌ರವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಸದನದ ಗಮನಕ್ಕೆ ತಂದಿದ್ದಾರೆ, ನಾವು ಅದನ್ನು ಗಮನಕ್ಕೆ ತೆಗೆದುಕೊಂಡಿದ್ದೇವೆ, ಅದಕ್ಕೆ ನಾವು ಉತ್ತರವನ್ನು ಕಳುಹಿಸಿ ಕೊಡುತ್ತೇವೆ.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ವಿಷಯ ಮಂಡನೆ ಮಾಡಲು ತಾವು ಅವಕಾಶವನ್ನು ಮಾಡಿಕೊಡಬೇಕು.

ಗೊಂದಲ

ಉಪಾಧ್ಯಕ್ಷರು : ನಾವು ಬೇರೆಯವರಿಗೂ ಅವಕಾಶವನ್ನು ಕೊಡಲಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ನನ್ನ ಉತ್ತರ ನಾನು ಕೊಡುತ್ತೇನೆ, ಅವರ ಎಕ್ಸಪ್ಲನೇಷನ್ ಕೊಡುವುದಕ್ಕೆ ಹಕ್ಕಿದೆ ಅದನ್ನು ಅವರು ಕೊಡುತ್ತಾರೆ. ಸದನದಲ್ಲಿ ಇವರು ವಿಷಯವನ್ನು ರೈಸ್ ಮಾಡುವುದಕ್ಕೆ ಹೇಗೆ ಹಕ್ಕು ಇದೆಯೋ, ಅದೇ ರೀತಿಯಾಗಿ ಅವರ ಮತಕ್ಷೇತ್ರದ ನಡೆದಂತಹ ಘಟನೆಯ ಬಗ್ಗೆ ಸದನದ ಗಮನಕ್ಕೆ ತರುವುದಕ್ಕೆ ಅವರಿಗೆ ಅಧಿಕಾರವಿದೆ; ಇಲ್ಲಿ ಉತ್ತರ ಕೊಡುವಂಥಾದ್ದು ಬೇರೆ, ಅವರ ಮತಕ್ಷೇತ್ರದ ಬಗ್ಗೆ ನಡೆದಿರುವಂಥಾದ್ದು ಹೇಳುವುದು ಬೇರೆ, ಅದನ್ನು ಅವರು ಹೇಳುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಸದಸ್ಯರ, ಹಕ್ಕಿಗೆ ಚ್ಯುತಿ ಬರು ಬರುತ್ತಿದೆ, ಅವರಿಗೆ ಅವಕಾಶವನ್ನು ಕೊಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹ ಸಚಿವರು ಹೇಳಿದಂತಹ ವಿಚಾರವನ್ನು ನಾವು ಶಿರಸಾ ವಹಿಸಿ ಒಪ್ಪುತ್ತೇವೆ.

ಉಪಾಧ್ಯಕ್ಷರು : ಈಗ ನಾನು ಶ್ರೀ ವೆಂಕಟರಮಣಪ್ಪನವರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ, ಅವರು ಮಾತನಾಡಲಿ, ನೀವು ಏಕೆ ತೊಂದರೆ ಕೊಡುತ್ತೀರಿ, ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಈಗ ತಾವು ಆ ಕ್ಷೇತ್ರದ ಶಾಸಕರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಾ?

ಉಪಾಧ್ಯಕ್ಷರು : ಕೊಟ್ಟಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಈಗ ನಮ್ಮ ಪ್ರಶ್ನೆ ಏನೂ ಅಲ್ಲ, ಈಗ ಆದೇಶವನ್ನು ಕೊಟ್ಟಿದ್ದೀರಿ, ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ, ಅವರಿಗೆ ಮಾತನಾಡುವುದಕ್ಕೆ ಹಕ್ಕು ಇಲ್ಲವೇ?

ಉಪಾಧ್ಯಕ್ಷರು : ನಾನು ಹೇಳಿದ್ದೇನೆ, ಅವರು ಮಾತನಾಡುತ್ತಿಲ್ಲ, ಮಾತನಾಡಿ.

ಶ್ರೀ ಸಿ. ಬೈರೇಗೌಡ : ಈಗ ನಾನು ಆ ವಿಚಾರವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಗೃಹ ಮಂತ್ರಿಗಳು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಈಗ ಇವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಾ?

ಉಪಾಧ್ಯಕ್ಷರು : ಇಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಆಮೇಲೆ ಅವರು ಹೇಳಲಿ.

ಉಪಾಧ್ಯಕ್ಷರು : ಮಾನ್ಯ ಬೈರೇಗೌಡರೇ, ನಾನು ಶ್ರೀ ವೆಂಕಟರಮಣಪ್ಪನವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ, ಅವರು ಮಾತನಾಡಲಿ, ತಾವು ಕುಳಿತುಕೊಳ್ಳಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಉಪಾಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ದಯಮಾಡಿ ನನಗೆ ಉತ್ತರವನ್ನು ಕೊಡಬೇಕಾಗುತ್ತದೆ, ನನಗೆ ಹೇಳುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಅವರು ಒಬ್ಬರು ಶೂನ್ಯ ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವಾಗ ಇನ್ನೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು, ಆಗ ಪಾಯಿಂಟ್ ಆಫ್ ಆರ್ಡರ್ ಇರಲಿಲ್ಲ, ಈಗ ಪಾಯಿಂಟ್ ಆರ್ಡರಾ..

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಹೌದು,

ಶ್ರೀ ಸಿ.ಆರ್. ಸಗೀರ್ ಅಹಮದ್ : ಚೆನ್ನಾಗಿ ಮಾತನಾಡುತ್ತೀರಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, I want a ruling from you, Sir. ನನಗೆ ನಿಮ್ಮಿಂದ ರೂಲಿಂಗ್ ಬೇಕು.

ಉಪಾಧ್ಯಕ್ಷರು : ಈಗ ಶೂನ್ಯವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಅನ್ವಯಿಸುವುದಿಲ್ಲ. ಈಗ ವಿಷಯ ಪ್ರಸ್ತಾಪ ಮಾಡುವುದಿದೆ, ದಯಮಾಡಿ ತಾವು ಕುಳಿತುಕೊಳ್ಳಿ, ನಾನು ಈಗ ಸದಸ್ಯರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ, ಅವರು ಮಾತನಾಡಲಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಉಪಾಧ್ಯಕ್ಷರೆ, I have got a point of Order.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಈ ಸದನದ ನಿಯಮಾವಳಿಯ ಪ್ರಕಾರ ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ಅವಕಾಶವಿದೆಯಾ, ಎಂಬುದನ್ನು ಹೇಳಲಿ, ಯಾವ ನಿಯಮಾವಳಿಯಲ್ಲಿದೆ, ಎಂಬುದನ್ನು ಅವರು ಹೇಳಲಿ.

ಗೊಂದಲ

1.30 ಪಿಎಂ

ಉಪಾಧ್ಯಕ್ಷರು : ನಾನು ಹೇಳುವುದು ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಮಾಡುವಂತಹ ಪ್ರಶ್ನೆಯಿಲ್ಲ, ಪ್ರಸ್ತಾಪ ಇಲ್ಲ, ಅದಕ್ಕೆ ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಉಪಾಧ್ಯಕ್ಷರೆ, ಅವರು ಅವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾತನಾಡುವುದಕ್ಕೆ ಹಕ್ಕಿದೆ ಅದನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಶೂನ್ಯವೇಳೆಯಲ್ಲಿ ಒಂದು ವಿಚಾರ ಗಡಿ ಬಗ್ಗೆ ಬಂತು, ತಾವೊಂದು ರೂಲಿಂಗ್ ಕೊಟ್ಟಿರಿ ಮಾನ್ಯ ಮಹಾದೇವಪ್ರಸಾದ್‌ರವರು ಸಹಿ ಮಾಡಿಕೊಟ್ಟಿದಾರೆ, ಅವರಿಗೆ ಮಾತ್ರ ಅವಕಾಶ ಕೊಟ್ಟಿರಿ, ಮಾನ್ಯ ಮೂರ್ತಿಯವರು ಅದೇ ಭಾಗದಿಂದ ಬಂದಿದ್ದರು, ಅವರ ಕ್ಷೇತ್ರದ ಪಕ್ಕದಲ್ಲೇ ಒಂದು ಗಡಿ ವಿಷಯವಿದೆ, ಅದಕ್ಕೆ ಮಾತನಾಡಲು ಅವಕಾಶ ಕೊಡುವುದಿಲ್ಲವೆಂದು ಅವರನ್ನು ಕೂರಿಸಿದಿರಿ. ಈಗ ಮತ್ತೆ ಶೂನ್ಯವೇಳೆಯಲ್ಲಿ ಬಂತು, ಮಾನ್ಯ ಸೋಮಶೇಖರ್‌ರವರು ಪ್ರಸ್ತಾಪ ಮಾಡಿದರು, ನೀವು ಪಾವಗಡ ಎಂಎಲ್‌ಎರವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಎಲ್ಲದಕ್ಕೂ ಒಂದೇ ನಿಯಮವಿರಬೇಕು, ನೀವು ಯಾವ ನಿಯಮವನ್ನು ಪಾಲಿಸುತ್ತೀರಿ ಹೇಳಿ?

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ಮಹಾದೇವಪ್ರಸಾದ್‌ರವರು ಪ್ರಸ್ತಾಪ ಮಾಡಿದಾಗ ಸೋಮಶೇಖರ್‌ರವರು ಮಾತನಾಡಿದರು ಅವಕಾಶ ಕೊಟ್ಟೆವು, ಆಮೇಲೆ ಸಿಂಧ್ಯಾರವರು ಮಾತನಾಡಿದರು ಆಗಲೂ ಅವಕಾಶ ಕೊಟ್ಟೆವು, ನಂತರ ಮಾನ್ಯ ಹೆಗ್ಡೆಯವರು ಮಾತನಾಡಿದರು ಅವರಿಗೂ ಅವಕಾಶ–ಕೊಟ್ಟೆವು.

Sri A.R. Krishna Murthy : You did not allowed me.

ಉಪಾಧ್ಯಕ್ಷರು : ನಿಮಗೆ ಅದೇ ವಿಷಯವನ್ನು ಪ್ರಸ್ತಾಪ ಮಾಡುತ್ತೀರಾ ಎಂದು ಕೇಳಿದೆ, ನೀವು ಅಕ್ಸೆಪ್ಟ್ ಮಾಡಿದಿರಿ; ಲೆಂಗ್ತಿ ಮಾತನಾಡಲು ಹತ್ತಿದ್ದಿರಿ. ಅವರು ಹೇಳಿದ್ದನ್ನು ಮತ್ತೆ ಹೇಳುವುದು ಬೇಡವೆಂದು ಹೇಳಿದೆ.

ಶ್ರೀ ಎ. ಆರ್. ಕೃಷ್ಣಮೂರ್ತಿ : ಗಡಿ ಬಗ್ಗೆ ಮಾಡಲಿಲ್ಲ ಸರ್.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪ ಸಭಾಧ್ಯಕ್ಷರೆ, ಈ ಶೂನ್ಯ ವೇಳೆಯಲ್ಲಿ ಕೆಲವು ಸೂಕ್ಷ್ಮವಾದ ವಿಚಾರಗಳನ್ನು ನಾನು ಎತ್ತಿದೆ, ನಾನು ಆ ಬಗ್ಗೆ ತಮಗೆ ನೋಟೀಸ್ ಕೊಟ್ಟಿದ್ದೆ, ತಾವು ಅದಕ್ಕೆ ಅವಕಾಶ ಕೊಟ್ಟಿರಿ. ಈಗ ಸಾಮಾನ್ಯವಾಗಿ ತಮ್ಮ ಅನುಭವದಲ್ಲಿ ಮುಖ್ಯಮಂತ್ರಿಗಳು ಎಲ್ಲಾ ಸಂದರ್ಭದಲ್ಲೂ ಬಹಳ ಗಾಂಭೀರ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಸಣ್ಣ ಪುಟ್ಟ ವಿಚಾರಗಳ ಬಗ್ಗೆ ಎದ್ದು ಮಾತನಾಡುವವರಲ್ಲ, ಬಹಳ ತೂಕವಾಗಿರತಕ್ಕಂಥ ಮುಖ್ಯಮಂತ್ರಿಗಳು. ನಾನು ಇಲ್ಲಿ ಪ್ರಸ್ತಾಪ ಮಾಡಿದೆ, ಮಾನ್ಯ ಗೃಹಮಂತ್ರಿಗಳು, ನಾನು ನಿಮ್ಮ ವಿಚಾರವನ್ನು ಗಮನಕ್ಕೆ ತೆಗೆದುಕೊಂಡಿದ್ದೇನೆ ನಾಳೆ ನಿಮಗೆ ಉತ್ತರವನ್ನು ಒದಗಿಸುತ್ತೇನೆಂದು ಹೇಳಿದರು, ನಿಯಮದಲ್ಲಿ ಉತ್ತರವನ್ನು ಈಗಲೇ ಹೇಳಬೇಕೆಂದು ಹೇಳುವುದಕ್ಕೆ ಅವಕಾಶವಿಲ್ಲ, ಗಮನಕ್ಕೆ ತರುವುದಕ್ಕೆ ಅವಕಾಶವಿದೆ, ಅವರು ಹೇಳಿದರು ಅದಕ್ಕೆ ನಾವು ಸುಮ್ಮನೆ ಕುಳಿತುಕೊಂಡೆವು. ಈಗ ಇರತಕ್ಕಂಥ ಪ್ರಶ್ನೆ ಅದೇ ವಿಚಾರದಲ್ಲಿ ನೋಟೀಸ್ ಕೊಡದಿದ್ದರೂ ನಾವು ಅವರ ಮೇಲೆ ಆಪಾದನೆ ಮಾಡದೇ ಇದ್ದರು,

ವೈಯಕ್ತಿಕವಾಗಿ ಯಾವುದೇ ಒಂದು ದೂರನ್ನು ಹೇಳದೇ ಇದ್ದರೂ ಮಂತ್ರಿಗಳು ಉತ್ತರವನ್ನು ಕೊಟ್ಟ ಮೇಲೂ ಮತ್ತೊಬ್ಬ ಸದಸ್ಯರು ನೋಟೀಸ್ ಕೊಡದೆ ಹೇಳುವುದಕ್ಕೆ ಅವಕಾಶವಿದೆಯಾ? ಅವರು ಹೇಳಿರುವುದಕ್ಕೂ ನಾನು ಹೇಳಿರುವುದಕ್ಕೂ ತಾವು ರೂಲಿಂಗ್ ಕೊಡಬೇಕು. ಒಂದು ರೂಲಿಂಗ್, ಮಾನ್ಯ ಕೆ.ಬಿ. ಮಲ್ಲಿಕಾರ್ಜುನ್‌ರವರು ರವರಿಗೆ ಸಂಬಂಧಿಸಿದ್ದು ಮತ್ತೊಂದು ಸಂಬಂಧಿಸಿದ ಮಂತ್ರಿಗಳು ನಾವು ಕೇಳಿದ ಪ್ರಶ್ನೆಗೆ ನಾಳೆ ನಿಮಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆಂದು ಹೇಳಿದ ಮೇಲೂ ಅದೇ ವಿಚಾರವನ್ನು ಸಹಿ ಮಾಡದೆ ಇರತಕ್ಕಂಥ ಮತ್ತೊಬ್ಬ ಸದಸ್ಯರು ಎತ್ತುವುದಕ್ಕೆ ಅವಕಾಶವಿದೆಯೇ? ನಾಳೆ ಬೇಕಾದರೆ ಕೇಳಲಿ ನಾಳೆ ನೋಟೀಸ್ ಕೊಟ್ಟು ಮತ್ತೆ ಅದೇ ವಿಚಾರವನ್ನು ಬೇಕಾದರೆ ಕೇಳಲಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇವರೇ ಮಾತನಾಡಿದ್ದಾರೆ. ಸಹಿ ಹಾಕದೆ ಮೊದಲು ಮಾತನಾಡಿದವರ ಪಟ್ಟಿಯಲ್ಲಿ ಮೊದಲನೆ ಹೆಸರು ಸನ್ಮಾನ್ಯ ಬಿ. ಸೋಮಶೇಖರ್‌ರವರದ್ದು, ಎರಡನೆಯ ಹೆಸರು ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯಾರವರದ್ದು, ಮೂರನೆ ಹೆಸರು ಶ್ರೀಮಾನ್ ವಿಶ್ವೇಶ್ವರ ಹೆಗ್ಡೆಯವರದ್ದು ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ್ದು ಬಂದರೆ ತಾವು ಹೇಳುವುದಿಲ್ಲವೆ? ಅದಕ್ಕೇನು? After all, it is the discretion of the chair. The Chair has permitted him. Why don't you allow him for 2-3 minutes to speak?

ಉಪಾಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೇ ಮಾನ್ಯ ಮಹಾದೇವಪ್ರಸಾದ್‌ರವರು ಕೇಳಿದಂಥ ಒಂದು ಪ್ರಸ್ತಾಪಕ್ಕೆ ತಾವು ಮಾತನಾಡಿದಿರಿ ನಾನು ಅವಕಾಶ ಕೊಟ್ಟೆ, ಮಾನ್ಯ ಸಿಂಧ್ಯಾರವರು ಮಾತನಾಡಿದರು ಅದಕ್ಕೂ ನಾನು ಅವಕಾಶ ಕೊಟ್ಟೆ ಮತ್ತೆ ನಮ್ಮ ಮಾನ್ಯ ಹೆಗ್ಡೆಯವರು ಮಾತನಾಡಿದರು. ಅದಕ್ಕೂ ಅವಕಾಶ ಕೊಟ್ಟೆ ಹೀಗೆ ಅವರು ಎತ್ತಿದ ವಿಷಯವನ್ನು ಮತ್ತೆ ನೀವು ಹೇಳುತ್ತೀರೇನು ಎಂದು ಅವರನ್ನು ಕೇಳಿದೆ, ಪ್ರಸ್ತಾಪ ಮಾಡಿದರು, ಆದರೆ ನೀವೆಲ್ಲಾ ನೋಟೀಸ್ ಕೊಟ್ಟಿದ್ದಿರೇನು? ಹೇಗೆ ನಿಮಗೆ ಅವಕಾಶ ಕೊಟ್ಟಿದ್ದೇನೆಯೋ ಅದೇ ರೀತಿ ಮಾನ್ಯ ಸದಸ್ಯರಾದ ವೆಂಕಟರಮಣಪ್ಪರವರಿಗೆ ಅವಕಾಶ ಕೊಟ್ಟಿದ್ದೇನೆ; ಮಾತನಾಡಲಿ.

ಶ್ರೀ ಬಿ. ಸೋಮಶೇಖರ್ : ಸರ್ಕಾರ ಉತ್ತರ ಕೊಟ್ಟ ಮೇಲೆ, ಅದೇ ವಿಷಯದ ಮೇಲೆ ಸದಸ್ಯರೊಬ್ಬರು ಮಾತನಾಡುವುದಕ್ಕೆ ಅವಕಾಶವಿದೆಯೇ ಎಂಬುದನ್ನು ಹೇಳಿ?

ಗೊಂದಲ

ಶ್ರೀ ವೆಂಕಟರಮಣಪ್ಪ (ಪಾವಗಡ) : ಮಾನ್ಯ ಉಪಾಧ್ಯಕ್ಷರೆ, ಸೋಮಶೇಖರ್‌ರವರು ಬಹಳ ಹಿರಿಯ ಸದಸ್ಯರು ಪದೇ ಪದೇ ಮಾತನಾಡುತ್ತಾರೆ. ನಮಗೆ ಮಾತನಾಡಲು ಅವಕಾಶ ಕೊಡಿ. ಚೋಳನಾಯಕನಹಳ್ಳಿಯಲ್ಲಿ ಗ್ಯಾಂಬ್ಲಿಂಗ್ ಆಡತಕ್ಕಂಥವರನ್ನು ಪೊಲೀಸ್‌ನವರು ಹಿಡಿದುಕೊಂಡು ಬಂದಿದ್ದಾರೆ ಅವರನ್ನು ಹಿಡಿದುಕೊಂಡು ಸ್ಟೇಷನ್‌ಗೆ ಹೋಗುವುದಕ್ಕಿಂತ ಮುಂಚೆ ಅವನಿಗೆ ಫಿಟ್ಸ್ ಬಂದಿದೆ, ವೈ.ಎನ್. ಹೊಸ ಕೋಟೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ, ಅಲ್ಲಿನ ವೈದ್ಯರು ಪಾವಗಡಕ್ಕೆ ಕರೆದುಕೊಂಡು ಹೋಗಿ ಎಂದು ಸಲಹೆ ಮಾಡಿದ್ದಾರೆ, ಕರೆದುಕೊಂಡು ಬರುವ ಹಾದಿಯಲ್ಲಿ ಅವನು ಎಕ್ಸ್‌ಪ್ರೈಸ್ ಆಗಿರುವುದು ನಿಜ. ಆತನ ಹೆಂಡತಿ, ತಮ್ಮಂದಿರು, ನಮ್ಮನ್ನು ಈ ಪೊಲೀಸ್‌ನವರು ಹೊಡೆದಿಲ್ಲ. ನನ್ನ ಗಂಡನಿಗೆ ವಾಯು ಬರುತ್ತಿತ್ತು ಅದರಿಂದ

ಎಕ್ಸ್‌ಪೈಸ್ ಆಗಿದ್ದಾರೆಂದು ಪೊಲೀಸ್ ಸ್ಟೇಷನ್‌ನಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಇಲ್ಲಿ ಧರಣಿ ಮಾಡುವುದಕ್ಕೆ ಸಂಬಂಧಿಸಿದಂತೆ ಇವರಿಗೇನೂ ಕೆಲಸವಿಲ್ಲ, ವಿರೋಧಪಕ್ಷದವರಿಗೆ ಒಂದೇ ಒಂದು ಉದ್ದೇಶವೇನೆಂದರೆ ಪೊಲೀಸ್‌ರವರು ಹೊಡೆದಿದ್ದಾರೆಂಬುದು. ಬೀದಿಯಲ್ಲಿ ಸ್ಟ್ರೈಕ್ ಮಾಡುವಂತಹ ಜನರನ್ನು ಪೊಲೀಸ್‌ರವರು ಹೊಡೆದಿದ್ದಾರೆಂದು ಹೇಳುತ್ತಿದ್ದಾರೆ, ಅವರ ಪಕ್ಷದವರೇ ಇದ್ದಾರೆ. ಪೊಲೀಸ್‌ನವರು ಪಾವಗಡದಲ್ಲಿ ಯಾರ ಮೇಲೆ ಕೈ ಮಾಡಿರುತ್ತಾರೆಂಬುದನ್ನು ಸಾಬೀತು ಮಾಡಲಿ ಅವರ ಹೇಳಿದಕ್ಕೆ ನಾನು ಒಪ್ಪುತ್ತೇನೆ. ಇಸ್ಪೀಟ್ ಆಡುತ್ತಿದ್ದವರನ್ನು ಪೊಲೀಸ್‌ನವರು ಕರೆದುಕೊಂಡು ಬಂದಿದ್ದು ತಪ್ಪಾ? ಆತ ವಾಯು ಬಂದು ಸತ್ತಿದ್ದಕ್ಕೆ, ವೈದ್ಯರು ಪಾವಗಡಕ್ಕೆ ಕರೆದುಕೊಂಡು ಹೋಗಿ ಎಂದು ಸಲಹೆ ಮಾಡಿದ್ದಾರೆ. ಹೆಂಡತಿ, ಅಣ್ಣತಮ್ಮಂದಿರೆಲ್ಲಾ ಹೇಳಿಕೆಯನ್ನು ಪೊಲೀಸಿನವರು ನಮ್ಮನ್ನು ಹೊಡೆದಿಲ್ಲವೆಂದು ಕೊಟ್ಟಿದ್ದಾರೆ. ಇಸ್ಪೀಟ್ ಆಡತಕ್ಕಂಥವನ ಜೊತೆಯಲ್ಲಿದ್ದಂತಹ 10 ಜನ, ಪೊಲೀಸ್‌ನವರು ನಮ್ಮನ್ಯಾರೂ ಹೊಡೆದಿಲ್ಲವೆಂದು ನಿನ್ನೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಇವರು ಈ ವಿಚಾರವನ್ನು ರಾಜಕೀಯ ಮಾಡಿ, ಈ ಕಾಂಗ್ರೆಸ್ ಸರ್ಕಾರ ಪೊಲೀಸ್ ದೌರ್ಜನ್ಯ ಮಾಡಿ ಹೊಡೆದಿದ್ದಾರೆನ್ನುವ ಮಾತನ್ನು ಹೇಳುತ್ತಿದ್ದಾರೆ. ಪೊಲೀಸ್‌ನವರು ಸ್ಟ್ರೈಕ್ ಮಾಡಿದವರೂ ಸೇರಿದಂತೆ ಯಾರನ್ನೂ ಹೊಡೆದಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಉಪಾಧ್ಯಕ್ಷರೆ, ಗ್ಯಾಂಬ್ಲಿಂಗ್ ಆಡುವವರನ್ನು ಇವರು ರಕ್ಷಣೆ ಮಾಡುತ್ತಾರೆ.

ಶ್ರೀ ವೆಂಕಟರಮಣಪ್ಪ : ಇಸ್ಪೀಟ್ ಆಡುವವರನ್ನು ಪೊಲೀಸ್‌ನವರು ಹಿಡಿದುಕೊಂಡು ಬರಬಾರದಿತ್ತೇ, ಅವರಿಗೆ ರೆಕಮೆಂಡ್ ಮಾಡಬೇಕಾಗಿತ್ತಾ?

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) : ನಡೆದಿರುವ ನಿಜ ಸಂಗತಿಯನ್ನು ಆ ಕ್ಷೇತ್ರದ ಶಾಸಕರು ಹೇಳಿದ್ದಾರೆ, ಈ ಸದನದಲ್ಲಿ ನನ್ನ ಕ್ಷೇತ್ರದಲ್ಲಿ ನಡೆದಂಥ ಘಟನೆಯ ಬಗ್ಗೆಯೂ ಪ್ರಸ್ತಾಪವಾಯಿತು. ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಡದೆ ಇದ್ದರೆ ನಾವು ಇನ್ನು ಎಲ್ಲಿ ಹೋಗಿ ಹೇಳುವುದಕ್ಕಾಗುತ್ತದೆ? ನನ್ನನ್ನು ಜನರು ಆಯ್ಕೆ ಮಾಡಿ ಕಳುಹಿಸಲಿಲ್ಲವೆ? ನಿಮ್ಮನ್ನು ಮಾತ್ರವೇ ಮಾತನಾಡಲು ಕಳುಹಿಸಿದ್ದಾರಾ? ನಾವೆಲ್ಲಾ ನೋಡಿದ್ದೇವೆ, ನಿಮ್ಮಿಂದ ಕಲಿಯುವಂತಹ ಅವಶ್ಯಕತೆ ನಮಗಿಲ್ಲ, ಎಲ್ಲಾ ಸಂಪ್ರದಾಯಗಳನ್ನು ನೋಡಿದ್ದೇವೆ. ಹೊಸ ಸಂಪ್ರದಾಯಗಳೇನೂ ಹಾಕಿಲ್ಲ, ಅವರವರ ಕ್ಷೇತ್ರದಲ್ಲಿ ನಡೆದ ವಿಚಾರವನ್ನು ಹೇಳಬಾರದೆ?

ಶ್ರೀ ಬಿ. ಸೋಮಶೇಖರ್ : ಸಾಮಾನ್ಯವಾಗಿ ಮುಖ್ಯಮಂತ್ರಿಗಳು ಇಂಥ ವಿಷಯಗಳಿಗೆ ಇಂಟರ್‌ಫಿಯರ್ ಆಗುತ್ತಿರಲಿಲ್ಲ. ಅವರು ಯಾವಾಗ ಇಂಟರ್‌ಫಿಯರ್ ಆದರು, ಎಲ್ಲರಿಗೂ ಧೈರ್ಯ ಬಂದಿಬಿಟ್ಟಿತು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದರಲ್ಲಿ ನಿಮಗೆ ಸಂಶಯವೇನು? ಅದರಲ್ಲಿ ಅನುಮಾನವೇನು ಸ್ವಾಮಿ? ಹೌದು, ಪಕ್ಷದ ನಾಯಕರಾಗಿ ಶಾಸಕರ ಕೈಬಲಪಡಿಸುವುದು ನಮ್ಮ ಜವಾಬ್ದಾರಿ.

ಶ್ರೀ ವೆಂಕಟರಮಣಪ್ಪ : ಸ್ವಾಮಿ, ನಮ್ಮ ಕ್ಷೇತ್ರದಲ್ಲಿ ನಡೆದಿರುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಂತ್ರಿಗಳ ಪರವಾಗಿ ಶಾಸಕರು ಉತ್ತರ ಕೊಡುತ್ತಿದ್ದಾರೆ. ಮತ್ತೆ ನಾಳೆ ಅದನ್ನೇ ಕೊಡಿ, ಬೇರೆಯಾಗಬಾರದು.

ಉಪಾಧ್ಯಕ್ಷರು : ಇರುವ ವಿಷಯವನ್ನು, ಅವರಿಗೆ ಗೊತ್ತಿರುವುದನ್ನು ಅವರು ಹೇಳಿದ್ದಾರೆ ಅಷ್ಟೇ. ನಿಮ್ಮ ಪ್ರಸ್ತಾಪ ಮುಗಿಯಿತೇ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇನ್ನು ಮೇಲೆ ಇಲ್ಲಿ ಮಂತ್ರಿಗಳು ಉತ್ತರ ಕೊಡುವುದು ಬೇಡ. ಮಂತ್ರಿಗಳ ಪರವಾಗಿ ಆಯಾ ಕ್ಷೇತ್ರದ ಶಾಸಕರೇ ಉತ್ತರ ಕೊಟ್ಟು ಬಿಡಲಿ; ಒಳ್ಳೆಯದಾಗುತ್ತದೆ. ಒಂದು ಹೊಸ ಸಂಪ್ರದಾಯವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸಂಪೂರ್ಣವಾಗಿ ವಿರೋಧ ಪಕ್ಷದವರ ಮಾತಿಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸಚಿವರು ಉತ್ತರ ಕೊಡುವ ಬದಲು ಶಾಸಕರೇ ಉತ್ತರ ಕೊಡುತ್ತಿದ್ದಾರೆ.

ಉಪಾಧ್ಯಕ್ಷರು : ನಿಮ್ಮ ಪ್ರಸ್ತಾಪ ಮುಗಿಯಿತಲ್ಲಾ.

ಶ್ರೀ ವೆಂಕಟರಮಣಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುತ್ತೇನೆ, ಪೊಲೀಸ್ ಸ್ಟೇಷನ್‌ನಲ್ಲಿ ಮೃತರ ಹೆಂಡತಿ, ಅಣ್ಣತಮ್ಮಂದಿರು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟನ್ನು ತಾವು ಬಂದು ನೋಡಿ. ಅವನನ್ನು ಯಾರೂ ಹೊಡೆದಿಲ್ಲ. ಆದ್ದರಿಂದ ದಯವಿಟ್ಟು ತಪ್ಪು ಮಾಹಿತಿಯನ್ನು ಜನಗಳ ಮುಂದೆ ಇಡಬೇಡಿ. ನೀವೇ ಬಂದು ನೋಡಿ. ಆ ಕೆಲಸವನ್ನು ಪೊಲೀಸಿನವರು ಮಾಡಿಲ್ಲ, ಪೊಲೀಸ್ ಸ್ಟೇಷನ್‌ನಲ್ಲಿ ಹೊಡೆದಿಲ್ಲ, ಅವನು ಪೊಲೀಸ್ ಸ್ಟೇಷನ್‌ನಲ್ಲಿ ಸತ್ತಿಲ್ಲ. ಇನ್ನೇನು ಹೇಳಬೇಕು? ದಯವಿಟ್ಟು ಅದನ್ನು ಕೈಬಿಡಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ಸಭಾನಾಯಕರು ಶೂನ್ಯವೇಳೆಯಲ್ಲಿ ಒಂದು ಹೊಸ ತಪ್ಪು ಸಂಪ್ರದಾಯವನ್ನು ಹಾಕಿ ನಿಯಮಾವಳಿಗಳನ್ನು .....

ಶ್ರೀ ಸಿ.ಆರ್. ಸಗೀರ್ ಅಹಮದ್ : ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ, ಯಾವ ನಿಯಮವಿದೆ ಇದರಲ್ಲಿ?

ಶ್ರೀ ಬಿ. ಸೋಮಶೇಖರ್ : ನಮಗೆ ಬಹಳ ನೋವಾಗಿದೆ. I think I am sorry to say that the Leader of the House has misled the House.

ಶ್ರೀ ಡಿ.ಬಿ. ಚಂದ್ರೇಗೌಡ : ಈ ರೀತಿ ಮಾತನಾಡಲು ತಾವು ಅವಕಾಶಕೊಟ್ಟರೆ ಹೇಗೆ? Are we running the House?

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, They are protecting it and they are setting a bad precedent. We are protesting this.

(ಈ ಹಂತದಲ್ಲಿ ಅಖಿಲಭಾರತ ಪ್ರಗತಿಪರ ಜನತಾದಳದ ಸದಸ್ಯರು ಬಿ. ಸೋಮಶೇಖರ್‌ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಲು ಮುಂದಾವರು)

ಉಪಾಧ್ಯಕ್ಷರು : ಈಗ ಶೂನ್ಯ ವೇಳೆ ಮುಗಿಯಿತು. ಈಗ ಸದನವನ್ನು 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನ ಮಧ್ಯಾಹ್ನ 1 ಗಂಟೆ 42 ನಿಮಿಷಕ್ಕೆ ಮುಂದೂಲ್ಪಟ್ಟು, ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.10 ಗಂಟೆಗೆ ಸಮಾವೇಶಗೊಂಡಿತು. ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್ ತಹಸೀಲ್ದಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

5. ನಿಯಮ 159ರ ಮೇರೆಗೆ (ಮುಂದು) ರಾಜ್ಯದಲ್ಲಿ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ಬರಗಾಲ ಹಾಗೂ ಕಾಮಗಾರಿ ಕೆಲಸ ಕುರಿತು.

†**ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ (ತಿಕೋಟ)** : ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಬರಗಾಲದ ವಿಚಾರದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನರ್ಪಿಸುತ್ತೇನೆ. ಬರಗಾಲದ ಮೇಲೆ ಈಗಾಗಲೇ ಕಳೆದ ನಾಲ್ಕೈದು ದಿವಸಗಳಿಂದ ಚರ್ಚೆ ಪ್ರಾರಂಭ ಮಾಡಿದ್ದೇವೆ. ಬರಗಾಲ ಈ ಸರ್ಕಾರವಿದ್ದರೆ ಬರುತ್ತದೆ, ಆ ಸರ್ಕಾರವಿದ್ದರೆ ಬರುತ್ತದೆಂದು ಹೇಳಲು ಅಥವಾ ದೂಷಿಸಲು ನಾನು ಇಷ್ಟಪಡುವುದಿಲ್ಲ. ಬರಗಾಲ ಪ್ರಕೃತಿದತ್ತವಾದ ಕೊಡುಗೆಯೆಂದು ಭಾವಿಸುತ್ತೇನೆ. ಆದರೆ, ಈ ವರ್ಷದ ಮೂರು ಋತುಮಾನಗಳಲ್ಲಿ ನಮ್ಮ ಪರಿಸ್ಥಿತಿ ಏನಾಗಿದೆಯೆಂದರೆ, ನಾಲ್ಕನೇ ಋತುಮಾನವನ್ನು ಕೂಡ ಸೇರಿಸಬೇಕಾದ ಭೀಕರ ಪರಿಸ್ಥಿತಿ ನಮಗೆ ಬಂದೊದಗಿದೆ. ಹೇಗೆ ನಾವು ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಎನ್ನುತ್ತೇವೋ, ಇದರ ನಂತರ ಈಗ ಬರಗಾಲ ಕೂಡ ನಾಲ್ಕನೆಯ ಕಾಲವಾಗಿ ಪರಿವರ್ತನೆಯಾಗಿದೆಯೆಂದರೆ ಅದು ಅತಿಶಯೋಕ್ತಿಯಾಗಲಿಲ್ಲ, ಬರಗಾಲ ಕೂಡ ನಾಲ್ಕನೆಯ ಕಾಲವಾಗಿ ಪರಿವರ್ತನೆಯಾಗಿದೆಯೆಂದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಬರಗಾಲ ಬಂದಿದೆಯೆಂದು ಯಾವುದೇ ಒಂದು ಸರ್ಕಾರ ಅಥವಾ ಪ್ರಜಾಪ್ರಭುತ್ವ ದತ್ತವಾದ ಅಧಿಕಾರ ಅದರಿಂದ ನುಣುಚಿಕೊಳ್ಳುವುದಕ್ಕಾಗುವುದಿಲ್ಲವೆಂದು ಭಾವಿಸುತ್ತೇನೆ. ಇಂತಹ ಬರಗಾಲ ಬಂದಾಗ ವಿಶೇಷವಾಗಿ ಬಹಳಷ್ಟು ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ಅಥವಾ ಮುಂದಾಲೋಚನೆಗಳನ್ನು ಸರ್ಕಾರಗಳು ನಿರಂತರವಾಗಿ ಮಾಡಿದ್ದರೆ ಪ್ರಾಯಶಃ ಇಂತಹ ಬರಗಾಲಗಳಿಗೆ ಒಂದು ಲಾಂಗ್‌ಟರ್ಮ್ ಮೆಷರ್ಸ್‌ನಲ್ಲಿ ಏನಾದರೂ ರೆಮಿಡೀಸ್ ಸಿಗಬಹುದಿತ್ತೇನೋ ಎಂದು ನಾನು ಭಾವಿಸುತ್ತೇನೆ. ದುರ್ದೈವವಶಾತ್, ಯಾವುದೇ ಸರ್ಕಾರ ಇರಲಿ, ನಿರಂತರವಾಗಿ ಬರಗಾಲ ಬಂದಾಗ, ಬರಗಾಲ ಎನ್ನುವ ಕಾಮಗಾರಿ ಮಾತ್ರ ಪ್ರಾರಂಭ ಮಾಡುತ್ತಾರೆ. ಅದಕ್ಕೆ ಶಾಶ್ವತವಾದ ಪರಿಹಾರ ಕೊಡುವ ದಿಸೆಯಲ್ಲಿ ನಾವ್ಯಾರೂ ಕೂಡ ಪ್ರಯತ್ನ ಮಾಡದಿರುವುದು ಸ್ವಲ್ಪಮಟ್ಟಿನ ನೋವಿನ ಸಂಗತಿಯೆಂದು ಭಾವಿಸುತ್ತೇನೆ. ಒಂದು ಕಡೆ ಬೇಂದ್ರೆಯವರು ಬರೆದಂಥ ಕವನವನ್ನು ಇಲ್ಲಿ ಹೇಳಬಯಸುತ್ತೇನೆ.

"ಹೆಡೆ ಎತ್ತಿತು ಮೋಡ, ಕಾಲೂರಿತು ಮಳೆ, ಕತ್ತೆತ್ತಿತು ಬೆಳೆ"

ಇದಕ್ಕೆ ತದ್ವಿವಿರುದ್ಧವಾಗಿ ನಮ್ಮ ಊರಿನ ಸಾಹಿತಿಯೊಬ್ಬರು ಒಂದು ಕವನವನ್ನು ಬರೆದಿದ್ದಾರೆ. ಅದೇನೆಂದರೆ,

"ಕಾಲೂರದ ಮಳೆ ಕತ್ತೆತ್ತದ ಬೆಳೆ"

ಮಳೆಯೇ ಬರಲಿಲ್ಲ ಹೀಗಾಗಿ ಬೆಳೆ ಬರುತ್ತದೆ ಎನ್ನುವ ಕಲ್ಪನೆ ಮಾಡುವುದೂ ಕೂಡ ದುರಾದೃಷ್ಟಕರ. ಆದರೆ ಇಂಥ ಸಂದರ್ಭದಲ್ಲಿ ಬರ ಪರಿಹಾರದ ಸಲುವಾಗಿ ನಮ್ಮಲ್ಲೂ ನಮ್ಮ ರಾಜ್ಯದಲ್ಲಿ ಬಹಳಷ್ಟು ಮೇಧಾವಿಗಳಿದ್ದಾರೆ. ಅನೇಕ ಜನ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದಾರೆ. ಆದರೆ ದುರ್ದೈವವಶಾತ್ ಅಂಥವರ ಸಲಹೆಗಳನ್ನು ನಾವು ಸ್ವಲ್ಪ ಮಟ್ಟಿಗೆ ಕಡಿಮೆ ತೆಗೆದುಕೊಂಡಿದ್ದೇವೆಂದು ನಾನು ಸ್ವಲ್ಪ

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)